ಸಹೋದರಿಯ ಕಪ್ಪು ಬಣ್ಣ ಮತ್ತು ಗಾಢ ಕಂದು ಕಣ್ಣುಗಳು ಏಕಿವೆ ಗೊತ್ತಾ?'

ನಾನು ಇಲ್ಲವೆಂಬಂತೆ ತಲೆಯಾಡಿಸಿದೆ.

'ನಿನ್ನ ಗ್ರೇಟ್ ಗ್ರೇಟ್ ಗ್ರ್ಯಾಂಡ್‌ಮದರ್ ಇಂಡಿಯನ್ ಆಗಿದ್ದಳು'.

ಅಂದು ಅಪ್ಪಾ ನನಗೆ ಮೊದಲ ಬಾರಿಗೆ ತಮ್ಮ ಪರಿವಾರದ ಇತಿಹಾಸವನ್ನು ಹೇಳಿದರು.

ಸಹೋದರ ಸಹೋದರಿಯರಾದ ನಮ್ಮ ಹುಟ್ಟಿನ ವೇಳೆಯಲ್ಲಿ ನಮ್ಮ ತಂದೆ ತಾಯಿ ಪರ್ತ್‌ನಲ್ಲಿರುತ್ತಿದ್ದರು. ಆದರೆ ನಾವು ಮೂಲ ರೂಪದಲ್ಲಿ ಎಬರಡೀನ್‌ಗೆ ಸೇರಿದ್ದೆವು. ನಮ್ಮ ಮುತ್ತಜ್ಜ ಗೇವಿನ್ ಸ್ಕಾಟ್ ಸಮುದ್ರದ ಕ್ಯಾಪ್ಟನ್ ಆಗಿದ್ದು, ಬ್ರಿಟಿಷ್ ವಸಾಹತು ದೇಶಗಳಲ್ಲಿ ಚಹಾದ ವ್ಯಾಪಾರ ಮಾರ್ಗಗಳಲ್ಲಿ ಜಲಯಾತ್ರೆಗಳನ್ನು ಕೈಗೊಳ್ಳುತ್ತಿದ್ದರು.

ಅವರು ತಮ್ಮ ಜೀವನವನ್ನು ಸ್ಕಾಟ್ಲೆಂಡಿನ ಉತ್ತರ ನಗರ ಎಬರಡೀನ್‌ನಲ್ಲಿ ಶಿಪ್‌ಯಾರ್ಡ್‌ನಿಂದ ಆರಂಭಿಸಿದ್ದರು. ಅವರು ಕ್ಲಿಪರ್ ನೌಕಾ ಹಡಗುಗಳನ್ನು ತಯಾರಿಸುತ್ತಿದ್ದರು. ಅವರು ಮತ್ತು ಅವರ ಗುಂಪು ಕೂಡ ಹಡಗಿಗೆ ಒಂದು ವಿಶೇಷ ಎಬರಡೀನ್ ಕ್ಲಿಪರ್ ಧನುಷವನ್ನು ತಯಾರಿಸಿದ್ದರು. ಅದು ಹಡಗಿನ ವೇಗದಲ್ಲಿ ಚಮತ್ಕಾರದಂಥ ವೃದ್ಧಿಗೆ ಕಾರಣವಾಗಿತ್ತು. ನನ್ನ ಮುತ್ತಜ್ಜ ತಯಾರಿಸಿದ ಎಬರಡೀನ್ ಥರ್ಮೋ ಪಿಲೆಯನ್ನು 1864ರಲ್ಲಿ ಸಿದ್ಧಪಡಿಸಲಾಗಿತ್ತು. ಅದು ಆ ಕಾಲದ ಸಮಗ್ರ ಕ್ಲಿಪರ್ ಹಡಗಾಗಿದ್ದು ಅದು ಹಿಂದಿನ ವೇಗದ ಎಲ್ಲಾ ದಾಖಲೆಗಳನ್ನು ಮುರಿದಿತ್ತು. ಅದು ವಾಣಿಜ್ಯದ ಕ್ಷೇತ್ರದಲ್ಲಿ ಒಂದು ಅದ್ಭುತ ಆವಿಷ್ಕಾರವಾಗಿದ್ದು, 'ಎಬರಡೀನ್ ರೇಖೆ'ಯಾಗಿ ಪ್ರಸಿದ್ಧವಾಯಿತು. ಆ ತೀವ್ರಗಾಮಿ ಕ್ಲಿಪರನ್ನು 'ಚಹಾ ಹಡಗು' ಎಂದು ಸಹ ಕರೆಯಲಾಗುತ್ತಿತ್ತು; ಅವು ಚೀನಾ, ಭಾರತ ಮತ್ತು ಅಕ್ಕಪಕ್ಕದ ದೇಶಗಳಲ್ಲಿ ಸಂಚರಿಸುತ್ತಿದ್ದವು; ಕ್ಲಿಪರ್‌ಗಳು ಬಹುತೇಕ ಚಹಾ ವ್ಯಾಪಾರ ಮಾರ್ಗಗಳಲ್ಲಿ ಚಹಾ ಎಲೆಗಳಿಗೆ ಹೊರಡುತ್ತಿದ್ದವು. ಚಹಾವಲ್ಲದೆ ರೇಷ್ಮೆ, ಮಸಾಲೆ ಮತ್ತು ಅಫೀಮನ್ನು ಸಹ ಹೊರುತ್ತಿದ್ದವು. ಅಫೀಮಿನ ಆಮದು–ರಫ್ತನ್ನು ಔಷಧದ ಉದ್ದೇಶಕ್ಕಾಗಿ ಉಪಯೋಗಿಸಲಾಗುತ್ತಿತ್ತು, ಆದರೆ ಇಂಡಿಯಾ, ಚೀನಾ ಮತ್ತು ಇಂಗ್ಲೆಂಡಿನಲ್ಲಿ ಅಫೀಮಿನ ಹೆಚ್ಚು ದುರುಪಯೋಗವಾಗುತ್ತಿತ್ತು.

ನನ್ನ ಮುತ್ತಜ್ಜ ಓರ್ವ ಬಿಲ್ಡರ್ಸ್ ಯಾರ್ಡ್‌ನ ಮುಖಾಂತರ ನೌಕರಿಯನ್ನು ಮಾಡುತ್ತಾ ಮೊದಲು ಹಡಗಿನ ಚಾಲಕರ ಗುಂಪಿನ ಸದಸ್ಯರಾದರು. ನಂತರ ಏಳಿಗೆಯನ್ನು ಪಡೆಯುತ್ತಾ ಒಂದು ಹಡಗಿನ ಕ್ಯಾಪ್ಟನ್ ಆದರು. ಅವರು ಹಡಗಿನ ಕ್ಯಾಪ್ಟನ್ ಆಗಿದ್ದಾಗ, ತಮ್ಮ ಭಾರತದ ಪ್ರಯಾಣದ ಸಂದರ್ಭದಲ್ಲಿ ಮುಂಬೈನಿಂದ ತಮಗೊಬ್ಬ ವಧುವನ್ನು ಸಹ ಕರೆತಂದರು ಎಂದು ಪರಿವಾರದ ಸೂತ್ರಗಳು ಹೇಳುತ್ತವೆ.

ಶತಮಾನಗಳು ಕಳೆದವು. ಅದೆಷ್ಟೋ ಜನ ಸ್ವರ್ಗಸ್ಥರಾದರು, ಆದರೆ ಕಥೆಗಳು ಮಾತ್ರ ಉಳಿದವು. ಎಂಟು ವರ್ಷದ ಬಾಲಕನಾದ ನಾನು ತಂದೆಯವರ ಮಾತು ಕೇಳಿ ಆಶ್ಚರ್ಯಗೊಂಡೆ. ನಾನು ಸಾಮಾನ್ಯವಾಗಿ ನನ್ನ ಮನೆಯ ಗೋಡೆಯಲ್ಲಿ ನೇತು ಹಾಕಲಾಗಿದ್ದ ಕ್ಲಿಪರ್ ಹಡಗಿನ ಪೇಂಟಿಂಗ್ ನೋಡುತ್ತಿದ್ದೆ. ನನ್ನ ಮುತ್ತಜ್ಜ ಹಡಗನ್ನು ನಿರ್ಮಿಸುತ್ತಿದ್ದರು. ಸಮುದ್ರಯಾನ ಮಾಡುತ್ತಿದ್ದರು. ನನ್ನ ಮುತ್ತಜ್ಜ ಸಾಹಸಿಗಳು ಮತ್ತು ರೋಮಾಂಚನಕಾರಿ ವ್ಯಕ್ತಿಗಳಾಗಿ ಕಂಡರು. ಅವರು ನನ್ನ ಆದರ್ಶವಾದರು.

ನಮ್ಮ ಮುತ್ತಜ್ಜಿ ಉನ್ನತ ವರ್ಗದ ಭಾರತೀಯ ವಂಶದ ರಾಜಕುಮಾರಿಯಾಗಿದ್ದಳೆಂದು ನನ್ನ ತಂದೆಯವರು ಹೇಳಿದರು. ನಾವು ರಾಜ ಮನೆತನಕ್ಕೆ ಸೇರಿದವರು, ಇದು ನಮ್ಮ ಪರಿವಾರದ ಒಂದು ಪ್ರಸಂಗ ಎಂಬ ಕಥೆಗೆ ಪುಷ್ಟಿ ನನ್ನ ಸೋದರತ್ತೆಯವರ ಸಂಶೋಧನೆಯಿಂದ ತಿಳಿಯಿತು. ಸ್ಕಾಟ್ಲೆಂಡಿನ ಉತ್ತರ–ಪೂರ್ವದಲ್ಲಿ ಎಲ್ಗಿನ್ ಎಂಬ ಪುರಾತನ ನಗರವಿದೆ, ಇದು ಚರ್ಚ್‌ಗಳಿಂದಾಗಿ ಪ್ರಸಿದ್ಧಿಯಾಗಿದೆ. ಎಲ್ಗಿನ್ ನಗರದ ಚರ್ಚ್‌ವೊಂದರಲ್ಲಿ ಸೋದರತ್ತೆಗೆ ನನ್ನ ಮುತ್ತಜ್ಜ ಮತ್ತು ಮುತ್ತಜ್ಜಿಯ ವಿವಾಹಕ್ಕೆ ಸಂಬಂಧಿಸಿದ ಅಂದರೆ, 'ಓರ್ವ ಸ್ಕಾಟ್ಸ್‌ಮೆನ್, ಓರ್ವ ಭಾರತೀಯ ವಧುವಿನೊಂದಿಗೆ ವಿವಾಹದ ಕಾರ್ಯವನ್ನು ಕೈಗೊಂಡ' ಎಂಬ ರೆಕಾರ್ಡ್‌ಗಳು ಲಭಿಸಿದವು. ನನ್ನ ಮುತ್ತಜ್ಜ–ಮುತ್ತಜ್ಜಿಯ ಮಗಳು ಸದಾ ಎಲ್ಗಿನ್‌ನಲ್ಲಿದ್ದಳು, ಅವರ ನಂತರ ಅವರ ಮಗಳು, ಅವರ ನಂತರ ಅವರ ಮಗಳು ಅಂದರೆ ನನ್ನ ಸೋದರತ್ತೆ ಸಹ ಎಲ್ಗಿನ್‌ನಲ್ಲಿಯೇ ಇದ್ದರು.

ನಮ್ಮ ಆನುವಂಶೀಯ ಕ್ರಮದ ಬಗ್ಗೆ ಈ ಮಾಹಿತಿ ನಮಗೆ ಪೀಳಿಗೆಯಿಂದ ಪೀಳಿಗೆಗೆ ಪಿತೃಪಕ್ಷದವರಿಂದಲೇ ತಿಳಿಯುತ್ತಿತ್ತು. ನನಗೆ ನನ್ನ ತಂದೆಯಿಂದ, ನಮ್ಮ ಮುತ್ತಜ್ಜಿ ಭಾರತೀಯಳಾಗಿದ್ದಳು ಎಂಬ ವಿಷಯ ತಿಳಿಯಿತು. ನನ್ನ ತಂದೆಗೆ ಈ ವಿಷಯ ಅವರ ತಂದೆಯಿಂದ, ಅಜ್ಜನಿಗೆ ಅವರ ತಂದೆಯಿಂದ ತಿಳಿಯಿತು. ನಮ್ಮ ಸೋದರತ್ತೆಯ ಸಂಶೋಧನೆಯಿಂದ, ಮುತ್ತಜ್ಜ ಮತ್ತು ಮುತ್ತಜ್ಜಿಯವರ ವಿವಾಹ 1850ರ ದಶಕದಲ್ಲಿ ನಡೆಯಿತು ಎಂದು ಊಹಿಸಬಹುದು. ಕ್ಲಿಪರ್ ಹಡುಗುಗಳ ಇತಿಹಾಸದಿಂದಲೂ ಈ ದಿನಾಂಕದ ಪುಷ್ಟಿಯಾಗುತ್ತದೆ.

ನನಗೆ ಭಾರತ ಒಂದು ಬಲವಾದ ಆಕರ್ಷಣೆಯ ದೇಶವಾಯಿತು. ನಾನು ಗ್ಲಾಸ್ಗೋದಲ್ಲಿರುವಾಗ ಅಲ್ಲಿಯ ಕಲಾ ವಿದ್ಯಾರ್ಥಿಯಾಗಿ ಬೌದ್ಧ ಧರ್ಮವನ್ನು ಅಧ್ಯಯನ ಮಾಡಿದೆ; ಭಾರತೀಯ ವಾಸ್ತುಕಲೆ ಮತ್ತು ಕಿರುಚಿತ್ರಗಳನ್ನು ನನ್ನ ಚಿತ್ರಕಲೆಯ ಪರಿಷ್ಕರಣೆಯಲ್ಲಿ ಉಪಯೋಗಿಸಿದೆ. ನಾನು ಅದ್ವೈತ ವೇದಾಂತ, ಉಪನಿಷದ್, ಭಗವದ್ಗೀತೆ ಮತ್ತು ಟಿಬೆಟ್ಟಿನ ಥೋಡೋಲ್ ಅಧ್ಯಯನದೊಂದಿಗೆ ಮಹಾಯಾನ ಪರಂಪರೆಯನ್ನು ಸ್ವೀಕರಿಸಿದೆ. ಭಾರತೀಯ ಪರಂಪರೆಗಳು ಮತ್ತು ಆಹಾರದ ಬಗ್ಗೆ ನನಗೆ ಸದಾ ಪ್ರೀತಿಯಿದೆ.

ನಾನು ಸಾಮಾನ್ಯವಾಗಿ ಭಾರತದ ಓರ್ವ ರಾಜಕುಮಾರನನ್ನು ಆಗಾಗ ಕನಸಿನಲ್ಲಿ ಕಾಣುತ್ತಿದ್ದೆ. ಅವನು ಕನಸಿನಲ್ಲಿ ನನ್ನ ಮುತ್ತಜ್ಜಿಯ ಸಹೋದರನಾಗಿರುತ್ತಿದ್ದ. ಅವನು ಭಾರತದ ಒಂದು ಭವ್ಯ ಭವನದ ಗ್ರಂಥಾಲಯದಲ್ಲಿ ಕೂತು ಒಂದು ಸುಂದರ ಹೊದಿಕೆಯ ಪುಸ್ತಕವನ್ನು ಓದುತ್ತಿದ್ದ. ಕಿಡಕಿಗೆ ಅಮೃತಶಿಲೆಯ ಸುಂದರ ಕೆತ್ತನೆಯಿದೆ. ಸ್ವಚ್ಛ ವಾತಾವರಣವಿದೆ. ನನ್ನ ಮುತ್ತಜ್ಜಿಯ ಪರಿವಾರದವರು ಶ್ರೀಮಂತರು. ಆದರೆ ಕನಸುಗಳು ವಾಸ್ತವಿಕತೆಯನ್ನು ಸಾಬೀತುಗೊಳಿಸಲಾರವು, ಆದರೆ ನನ್ನ ಕನಸು ನನ್ನ ಮೇಲೆ ಎಷ್ಟು ಪ್ರಭಾವ ಬೀರಿದೆ ಎಂದರೆ, ನನ್ನ ಮುತ್ತಜ್ಜಿ ವಾಸ್ತವವಾಗಿಯೂ ಶ್ರೇಷ್ಠ ಮನೆತನದವರು ಎಂಬ ಭಾವನೆ ನನ್ನಲ್ಲಿ ಬೇರೂರುತ್ತಿದೆ.

ನನಗೆ 'ವಸುಧೈವ ಕುಟುಂಬಕಂ'ನಲ್ಲಿ ವಿಶ್ವಾಸವಿದೆ. ಸಂಸ್ಕೃತಿಗಳ ಪಾಲುಗಾರಿಕೆ ಮತ್ತು ಜಾಗತಿಕ ಸಹ ಸಮೃದ್ಧಿಯಲ್ಲೂ ವಿಶ್ವಾಸವಿದೆ. ಇಂದು ಒಬ್ಬ ವ್ಯಕ್ತಿಯ ಧಮನಿಗಳಲ್ಲಿ ಫ್ರೆಂಚ್, ಜರ್ಮನ್ ಮತ್ತು ಬ್ರಿಟಿಷ್ ಅಂದರೆ ಅನೇಕ ವಂಶಗಳ ರಕ್ತದ ಮಿಶ್ರಣ ಹರಿಯುವುದು ಸಾಮಾನ್ಯ ಸಂಗತಿಯಾಗಿದೆ. ಮೊದಲ ಮತ್ತು ಎರಡನೆಯ ಮಹಾಯುದ್ಧದ ಸಮಯದಲ್ಲಿ ಈ ಯೂರೋಪ್ ದೇಶಗಳು ಪರಸ್ಪರ ಕಟ್ಟಾ ಶತ್ರುಗಳಾಗಿದ್ದವು. ಈಗ ವಿಭಿನ್ನ ಜಾತಿ ಪ್ರಜಾತಿಯ ಜನ ಪರಸ್ಪರರಲ್ಲಿ ವೈವಾಹಿಕ ಸಂಬಂಧಗಳನ್ನು ಬೆಳೆಸಿ ಶಾಂತಿಯಿಂದಿದ್ದಾರೆ. ನಮ್ಮಂಥ ವಂಶಾವಳಿ ಸೇತುವೆಯಂತೆ ಕಾರ್ಯವೆಸಗುತ್ತದೆ. ನನ್ನ ಮುತ್ತಜ್ಜ ಆ ಶತಮಾನದಲ್ಲಿ ಇಂಥ ಹೆಜ್ಜೆಯನ್ನಿಟ್ಟಿದ್ದರು. ನನಗೆ ಅವಕಾಶ ಲಭಿಸಿದರೆ ನಾನು ಭಾರತಕ್ಕೆ ಹೋಗಲು ಬಯಸುತ್ತೇನೆ, ನನ್ನ ವಂಶಾವಳಿಯ ಬಗ್ಗೆ ಇನ್ನೂ ಹೆಚ್ಚು ಆಸಕ್ತಿಯನ್ನು ವಹಿಸುತ್ತೇನೆ.

ಆ ಅವಕಾಶ ಇಂದು ಬಂದಿತ್ತು. ನಾನು ಭಾರತದ ನೆಲದ ಮೇಲೆ ಕಾಲಿಡುತ್ತಲೇ ರೋಮಾಂಚನಗೊಂಡಿದ್ದೆ. ನನ್ನ ಮುತ್ತಜ್ಜನ ದೇಶ. ನನ್ನ ಪೂರ್ವಿಕರ ದೇಶ. ಅನೇಕ ಭಾವನೆಗಳು ನನ್ನನ್ನು ಆವರಿಸಿದವು. ನಾನು ಗೇಟ್‌ವೆ ಆಫ್ ಇಂಡಿಯಾದ ಬಳಿ ನಿಂತು ಮಂತ್ರಮುಗ್ಧನಾಗಿ ಸುತ್ತಮುತ್ತ ನೋಡುತ್ತಾ ನನ್ನ ಮುತ್ತಜ್ಜನನ್ನು ಕಾಣುತ್ತಿದ್ದೆ. ಅವರು ಹದಿನೆಂಟನೆಯ ಶತಮಾನದಲ್ಲಿ ಈ ವಿಶಾಲ ಅರಬ್ಬಿ ಸಾಗರದ ಅಲೆಗಳನ್ನು ಸೀಳುತ್ತಾ ತಮ್ಮ ಗುಂಪಿನೊಂದಿಗೆ ಬಹುಶಃ ಇಲ್ಲಿಗೆ ಬರುತ್ತಿದ್ದರೇನೋ.

ನನ್ನ ಮುತ್ತಜ್ಜಿಯನ್ನು ಕಲ್ಪಿಸಿಕೊಳ್ಳಲಾರಂಭಿಸಿದೆ. ಅರಮನೆಗಳ ಆ ಕೋಮಲ ರಾಜಕುಮಾರಿ ಕ್ಲಿಪರ್ ನೋಡಲು ಈ ರೇವುಪಟ್ಟಣಕ್ಕೆ ಬಂದಿದ್ದಾಳೆ. ನನ್ನ ಮುತ್ತಜ್ಜ ಅವಳನ್ನು ಕ್ಲಿಪರ್‌ನಲ್ಲಿ ಓಡಾಡಿಸುತ್ತಿದ್ದಾರೆ. ಅವಳು ಬ್ರಿಟಿಷ್ ಮತ್ತು ಸ್ಕಾಟಿಷ್ ಕ್ಯಾಪ್ಟನ್‌ಗಳನ್ನು ಉತ್ಸುಕತೆಯಿಂದ ನೋಡುತ್ತಿದ್ದಾಳೆ. ಕೆಂಪು ಗೋಧಿ ಬಣ್ಣ, ಸೊಂಟದವರೆಗೆ ಇಳಿಬಿಟ್ಟ ನೀಳ ದಟ್ಟ ಕೇಶರಾಶಿ, ತೀಕ್ಷ್ಣ ನಯನಗಳು ಮತ್ತು ತೆಳು ಕಾಯದ ನನ್ನ ಮುತ್ತಜ್ಜಿ ವಿಲಕ್ಷಣ ಸುಂದರಿಯಾಗಿದ್ದಾಳೆ. ಅವಳ ಸೀರೆಯ ಸೆರಗು ಗಾಳಿಯಲ್ಲಿ ಹಾರಾಡುತ್ತಿದೆ. ಅವಳನ್ನು ಯೌವನದ ಉನ್ಮಾದ ಆವರಿಸಿದೆ.